ವಿಶ್ವಬ್ಯಾಂಕ್ ನೆರವಿನಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಗುತ್ತಿಗೆ ದಸ್ತಾವೇಜುಗಳ ಸಿದ್ದತೆ ಪಡೆಯುತ್ತಿದೆ.

ಇ) ವಿಶ್ವಬ್ಯಾಂಕ್ ಅನುಮೋದನೆಯ ನಂತರ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುವುದು

ಈ) ಜಮಖಂಡಿ–ಕಾಗವಾಡ ರಸ್ತೆಗೆ ಸಂಬಂಧಿಸಿದಂತೆ ಈವರೆಗೆ ಯಾವುದೇ ಹಣಕಾಸು ಸಂಸ್ಥೆಯಿಂದ ನೆರವು ಒದಗಿಸಿಲ್ಲ. ಈ ಬಗ್ಗೆ ಸರ್ಕಾರವು ಮುಂದಿನ ಆರ್ಥಿಕ ಸಾಲಿನಲ್ಲಿ ಸಂಬಂಧಪಟ್ಟ ಹಣಕಾಸು ಸಂಸ್ಥೆಗಳಿಂದ ನೆರವು ಪಡೆಯಲು ಅಗತ್ಯ ಕ್ರಮಕೈಗೊಳ್ಳಲಾಗುವುದು. ಅಲ್ಲಿಯವರೆಗೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ) ವಲಯದಿಂದ ರಸ್ತೆ ನಿರ್ವಹಣೆ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ನೇಕಾರರಿಗೆ ಶೇಕಡಾ 3 ರಷ್ಟು ರಿಯಾಯಿತಿ ಬಡ್ಡಿ ಸಾಲ

217(560) ಶ್ರೀ ಸಿದ್ದು ಸವದಿ:(ತೇರದಾಳ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ವಿವಿಧ ವೃತ್ತಿಗಳಿಗೆ ಶೇಕಡ 3 ರಷ್ಟು ರಿಯಾಯಿತಿ ಬಡ್ಡಿ ಸಾಲ ವಿತರಿಸುವ ಯೋಜನೆಗಳಾವುವು? ಹಾಗಿದ್ದಲ್ಲಿ, ಇಲ್ಲಿಯವರೆಗೆ ರೈತರು, ನೇಕಾರರು ಮತ್ತು ಮೀನುಗಾರರಿಗೆ ನೀಡಿರುವ ಸಾಲಗಳೆಷ್ಟು?

ಆ. ನೇಕಾರರಿಗೆ ಈ ಸಾಲವನ್ನು ಕೊಡಲು ಬ್ಯಾಂಕುಗಳು ಮತ್ತು ಸಹಕಾರ ಸಂಘಗಳು ಮುಂದೆ ಬಂದಿಲ್ಲದಿರುವುದರಿಂದ ನೇಕಾರರು ಈ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ. ನೇಕಾರರಿಗೂ ರೈತರಂತೆ ಶೇಕಡ 3ರಷ್ಟು ರಿಯಾಯಿತಿ ಬಡ್ಡಿಯಿಂದ ಸಾಲ ದೊರಕಿಸಿಕೊಡಲು ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಲಕ್ಷ್ಮಣ ಸ ಸವದಿ(ಸಹಕಾರ ಸಚಿವರು):

ಅ) ರಾಜ್ಯದಲ್ಲಿ ರೈತರು, ನೇಕಾರಿಕೆ ಮತ್ತು ಮೀನುಗಾರಿಕೆ ವೃತ್ತಿಗಳಿಗೆ ದಿ.01–04–2008 ರಿಂದ ಶೇ. 3ರಷ್ಟು ರಿಯಾಯಿತಿ ಬಡ್ಡಿದರದಲ್ಲಿ ಸಾಲ ವಿತರಿಸಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ.

ವಿತರಿಸಿರುವ ಸಾಲಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

(ರೂ.ಕೋಟಿಗಳಲ್ಲಿ)

ಕ್ರ ಸಂ	ಕೃಷಿ ಸಾಲ		ನೇಕಾರಿಕೆ ಸಾಲ		ಮೀನುಗಾರಿಕೆ ಸಾಲ	
	ಪ್ರ.ಸಂಖ್ಯೆ	ಮೊತ್ತ	ಪ್ರ.ಸಂಖ್ಯೆ	ಮೊತ್ತ	ಪ್ರ.ಸಂಖ್ಯೆ	ಮೊತ್ತ
1	2630255	7466.97	6315	71.61	2412	6.07

ಆ) ಹೌದು.

ಇ) 2008–09 ಮತ್ತು 2009–10ನೇ ಸಾಲಿನಲ್ಲಿ ನೇಕಾರಿಕೆ ವೃತ್ತಿಗೆ ನೇಕಾರ ಸಹಕಾರ ಸಂಘಗಳು/ಪತ್ತಿನ ಸಹಕಾರ ಸಂಘಗಳು/ಡಿ.ಸಿ.ಸಿ. ಬ್ಯಾಂಕುಗಳು ಮತ್ತು ಇತರೆ ಸಹಕಾರ ಸಂಘಗಳು ಶೇ.3 ರ ಬಡ್ಡಿದರದಲ್ಲಿ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲವನ್ನು ಒದಗಿಸಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ.

ನೂತನ ಉಪಕಾರಾಗೃಹ ಕಾಮಗಾರಿ

218(542) ಶ್ರೀ ಸುಭಾಷ್ ಆರ್ ಗುತ್ತೇದಾರ್:(ಆಳಂದ) ಮಾನ್ಯ ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ನೂತನ ಉಪಕಾರಾಗೃಹ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಉಪ ಕಾರಾಗೃಹ ನಿರ್ಮಾಣ ಕಾಮಗಾರಿಗಾಗಿ ಅಂದಾಜಿಸಲಾಗಿರುವ ಅಂದಾಜು ಮೊತ್ತವೆಷ್ಟು, ಈ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ?

ಇ) ಈ ಕಾಮಗಾರಿ ಯಾವ ಹಂತದಲ್ಲಿದೆ? (ಪೂರ್ಣ ಮಾಹಿತಿ ನೀಡುವುದು)?

ಶ್ರೀ ಉಮೇಶ್ ವಿ ಕತ್ತಿ(ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು):

ಅ) ಬಂದಿದೆ.

ಆ) ಈ ಉಪಕಾರಾಗೃಹ ನಿರ್ಮಾಣ ಕಾಮಗಾರಿಗಾಗಿ ಅಂದಾಜಿಸಲಾಗಿರುವ ಮೊತ್ತ ರೂ. 150.00 ಲಕ್ಷಗಳು. ಈ ಕಾಮಗಾರಿಯನ್ನು ಇನ್ನೂ ಪ್ರಾರಂಭಿಸಬೇಕಾಗಿದೆ.